ಸಂಪಾದಕೀಯ

ಆಚರಣೆಗಳ ಉಪಯುಕ್ತತೆ

ಧರ್ಮವೆಂಬುದು ಕೆಲಸಕ್ಕೆ ಬಾರದ ಆಚರಣೆಗಳ ಕಂತೆಯೆಂದೂ, ಮೂಢನಂಬಿಕೆಗಳಿಂದ ಕೂಡಿದ ಒಂದು ಸಾಮಾಜಿಕ ಪಿಡುಗು ಎಂದೂ ಹೇಳುವವರಿದ್ದಾರೆ. ಈ ಕಾರಣದಿಂದ ಒಟ್ಟು ಧರ್ಮವನ್ನೇ ಹೀಗಳೆಯುವ, ಧಿಕ್ಕರಿಸುವ ಜನರಿಗೂ ಕೊರತೆಯಿಲ್ಲ. ಆಚರಣೆಗಳಲ್ಲಿ ಕೆಲವು, ಮೂಢನಂಬಿಕೆಯನ್ನು ಅನುಸರಿಸಿ ಯಾವ ಧಾರ್ಮಿಕ-ಆಧ್ಯಾತ್ಮಿಕ ಲಾಭವೂ ಇಲ್ಲದೆ ಹಲವು ಬಗೆಯ ಅನಾಚಾರ, ಅನ್ಯಾಯಗಳಿಗೆ ಅವು ಕಾರಣವಾಗಿವೆ ನಿಜ. ಅಂಥವುಗಳನ್ನು ನಾವು ತ್ಯಜಿಸಬೇಕು. ಆದರೆ ಇನ್ನೆಷ್ಟೋ ಆಚರಣೆ ಅಥವಾ ಕ್ರಿಯಾವಿಧಿಗಳ ಹಿಂದೆ ಒಂದು ವಿಶಿಷ್ಟ ಉದ್ದೇಶವಿರುತ್ತದೆ; ಧಾರ್ಮಿಕ ಅಥವಾ ಆಧ್ಯಾತ್ಮಿಕ ಉನ್ನತಿಗೆ, ವ್ಯಕ್ತಿಯ ಬೆಳವಣಿಗೆಗೆ ಅವು ಅತ್ಯಗತ್ಯವಾಗಿರುತ್ತವೆ. ಅವುಗಳನ್ನು ಬಿಡುವುದರಿಂದ ಸಮಾಜಕ್ಕೆ ದೊಡ್ಡ ನಷ್ಟವೇ ಆಗುವುದು. ಸಹಸ್ರಾರು ವರ್ಷಗಳಿಂದ ಹರಿದು ಬಂದ ಪರಂಪರೆಯಲ್ಲಿ ಅಡಗಿರುವ ಈ ಆಚರಣೆಗಳು ಕೆಲವು ಶ್ರೇಷ್ಠ ಧಾರ್ಮಿಕ-ಆಧ್ಯಾತ್ಮಿಕ ಭಾವಗಳನ್ನು ನಮ್ಮ ಸಮಾಜದಲ್ಲಿ ಹಿಡಿದಿಟ್ಟಿವೆ. ಅವುಗಳನ್ನು ಸಾರಾಸಗಟಾಗಿ ತಿರಸ್ಕರಿಸಬೇಕೆ? ಯಾವುದು ಮೂಢನಂಬಿಕೆ, ಯಾವುದು ಅನಗತ್ಯವಾದ ಗೊಡ್ಡು ಆಚರಣೆ; ಯಾವುದು ಹಾನಿಕರವಾದ ಅಂಶ ಎಂಬುದನ್ನು ವಿವೇಚನೆಯಿಂದ ಅರಿತುಕೊಂಡು, ನಮ್ಮ ಬದುಕನ್ನು ಮೇಲೆತ್ತುವ ಹಾಗೂ ವ್ಯಕ್ತಿ-ಸಮಾಜ ಇವೆರಡರ ಉನ್ನತಿಗೆ ಸಹಾಯವಾಗುವ ಉತ್ತಮ ಆಚರಣೆಗಳನ್ನು ಮಾತ್ರ ನಾವು ಪುರಸ್ಕರಿಸಬೇಕು. ನಿಜವಾದ ಧಾರ್ಮಿಕ-ಆಧ್ಯಾತ್ಮಿಕ ಆಚರಣೆಗಳು ಎಂದಿಗೂ ಸಮಾಜಕ್ಕೆ ಮಾರಕವಲ್ಲ ; ಬದಲಾಗಿ ಅವು ಅನೇಕ ಸಾಮಾಜಿಕ, ವೈಯಕ್ತಿಕ ಸಮಸ್ಯೆಗಳನ್ನು ಪರಿಹರಿಸುತ್ತವೆ. ಯಾವ ಅರ್ಥವೂ ಇಲ್ಲದ, ಹಾನಿಕರವಾದ ಆಚರಣೆಗಳು ಯಾವುವು ಎಂದು ಗುರುತಿಸಿ, ಅವುಗಳನ್ನು ಕೈಬಿಡುವ ಹಾಗೂ ನಿಜಕ್ಕೂ ಅರ್ಥಪೂರ್ಣವಾದ ಆಚರಣೆಗಳನ್ನು ಉಳಿಸಿಕೊಳ್ಳುವ ಕಾರ್ಯವನ್ನು ಪ್ರಜ್ಞಾವಂತರು ಮಾಡಬೇಕು. ಆಗ ಮಾತ್ರ ಆಚರಣೆಗಳ ಲಾಭ ಸಮಾಜಕ್ಕೆ ಲಭಿಸುವುದು.

ಧರ್ಮದ ಒಂದು ಹಂತವಾಗಿ ಆಚರಣೆ

ದೈವೀಶಕ್ತಿಯ ಅಸ್ತಿತ್ವವನ್ನು ಒಪ್ಪಿಕೊಂಡು, ಆ ಶಕ್ತಿಯ ಸಾಕ್ಷಾತ್ಕಾರಕ್ಕಾಗಿ ಸಾಧನೆ ಮಾಡುವುದೇ ಎಲ್ಲ ಧರ್ಮಗಳ ಗುರಿ. ಅತ್ಯಂತ ಎತ್ತರದಲ್ಲಿರುವ ಈ ಗುರಿಯನ್ನು ತಲುಪಲು ಮಾನವನಿಗೆ ಹಂತಹಂತವಾಗಿ ಸಾಗುವ, ಮೆಟ್ಟಿಲು ಮೆಟ್ಟಿಲಾಗಿ ಏರುವ ಅಗತ್ಯವಿದೆ. ಈ ಕಾರಣಕ್ಕಾಗಿ — ಅಂದರೆ ಧಾರ್ಮಿಕ ತರಬೇತಿಯ ಅಂಗವಾಗಿ ಆಚರಣೆಗಳು ಬಂದಿವೆ. ಸ್ವಾಮಿ ವಿವೇಕಾನಂದರು ಈ ಕುರಿತು ಹೇಳಿರುವ ಮಾತುಗಳು ತುಂಬ ಮುಖ್ಯ:

''ಪ್ರತಿಯೊಂದು ಧರ್ಮದಲ್ಲಿಯೂ ಮೂರು ಭಾಗಗಳಿವೆ. ಮೊದಲನೆಯದು ತತ್ತ್ವಜ್ಞಾನ; ಎರಡನೆಯದು ಪುರಾಣ; ಮೂರನೆಯದು ಕ್ರಿಯಾವಿಧಿ...

''ಕ್ರಿಯಾವಿಧಿಯು ಪ್ರತಿಯೊಬ್ಬನೂ ಗ್ರಹಿಸುವಂತೆ ಆ ತತ್ತ್ವಜ್ಞಾನಕ್ಕೆ ಇನ್ನೂ ಹೆಚ್ಚಾಗಿ ಮೂರ್ತರೂಪವನ್ನು ಕಲ್ಪಿಸುತ್ತದೆ. ವಾಸ್ತವವಾಗಿ ಕ್ರಿಯಾವಿಧಿ ಎಂಬುದು ಆತ್ಮಜ್ಞಾನದ ಮೈವೆತ್ತ ಪ್ರಕಾಶನ. ಮತ್ತು ಈ ವಿಧಿಯೇ ಕರ್ಮ. ಈ ವಿಧಿ ಪ್ರತಿಯೊಂದು ಧರ್ಮಕ್ಕೂ ಆವಶ್ಯಕ. ಏಕೆಂದರೆ ನಮಗೆ ಆಧ್ಯಾತ್ಮಿಕ ಜ್ಞಾನ ವೃದ್ಧಿಯಾಗುವವರೆಗೆ ಅಮೂರ್ತ ಭಾವಗಳನ್ನು ಗ್ರಹಿಸಿ, ರಕ್ತಗತವಾಗಿ ಮಾಡಿಕೊಳ್ಳುವುದು ಬಲು ಕಷ್ಟವೆಂಬುದು ಕಂಡುಬರುತ್ತದೆ. ಆದ ಕಾರಣ ಸಂಕೇತಗಳು ಬಹಳ ಸಹಕಾರಿ, ಸಾಂಕೇತಿಕವಾಗಿ ವಿಷಯಗಳನ್ನು ನಿರೂಪಿಸುವುದು ನಮಗೆ ಅನಿವಾರ್ಯ.''

(ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ಸಂ.೧, ಪು.೭೫)

ಆಧ್ಯಾತ್ಮಿಕತೆಯ ಉನ್ನತ ಭಾವಗಳನ್ನು ಗ್ರಹಿಸಲು ಇನ್ನೂ ಅಸಾಧ್ಯವೆನಿಸುವ, ಮಾನಸಿಕ ಬೆಳವಣಿಗೆಯ ಹಂತದಲ್ಲಿರುವ ಸಾಮಾನ್ಯ ಜನರಿಗೆ ಧರ್ಮ, ಅಧ್ಯಾತ್ಮಗಳೇ ಬೇಡವೆನ್ನಲಾದೀತೆ? ನಂಬಿಕೆಯೇ ಮಾನವ ಜೀವನದ ಆಧಾರಸ್ತಂಭ. ಆದ್ದರಿಂದ ಈ ನಂಬಿಕೆ ದೃಢವಾಗಿ ನಿಲ್ಲಲು ಒಂದಲ್ಲ ಒಂದು ಬಗೆಯ ಧಾರ್ಮಿಕ ಭಾವನೆ ಅಗತ್ಯವಾಗಿದೆ. ಅಮೂರ್ತವೂ ಅಗಾಧವೂ ಸೂಕ್ಷ್ಮವೂ ಆದ ಭಾವನೆಗಳನ್ನು ಜನಸಮಾನ್ಯರಿಗೆ ಗ್ರಹಿಸುವುದೂ ಕಷ್ಟ, ಆ ಭಾವನೆಗಳನ್ನು ಅವರಿಗೆ ದಾಟಿಸುವುದೂ ಕಷ್ಟ. ಈ ತೊಂದರೆಯನ್ನು ನಿವಾರಿಸಲು ಧರ್ಮಗಳು ಕಂಡುಕೊಂಡಿರುವ ಅತ್ಯುತ್ತಮ ಸಾಧನವೇ ಆಚರಣೆ ಅಥವಾ ಕ್ರಿಯಾವಿಧಿಗಳು. ಈ ಮೂಲಕ ಬೌದ್ಧಿಕವಾಗಿ ವಿವರಿಸುವ, ಅರ್ಥ ಮಾಡಿಸುವ ಗೋಜಿಗೆ ಹೋಗದೆ, ಸಂಕೇತಗಳ ಮೂಲಕ ಧಾರ್ಮಿಕ ಭಾವನೆಗಳನ್ನು ಜನರು ವ್ಯಕ್ತಪಡಿಸುವುದು ಸುಲಭವೆನಿಸಿತು. ಹೀಗೆ ಆಚರಣೆಗಳಲ್ಲೆಲ್ಲ ಹಲವು ಸಂಕೇತಗಳ ಬಳಕೆ ಕಂಡುಬರುತ್ತದೆ.

ಮಾನಸಿಕ ಕ್ರಿಯೆಗೆ ದೈಹಿಕ ಕಡಿವಾಣ

ಆಧ್ಯಾತ್ಮಿಕ ಕ್ರಿಯೆ ಪ್ರಧಾನವಾಗಿ ನಡೆಯುವುದು ಮಾನಸಿಕವಾಗಿ. ಜ್ಞಾನ, ಭಕ್ತಿ, ಯೋಗ ಈ ಮಾರ್ಗಗಳು ಮಾನಸಿಕ ಶಿಸ್ತಿನ, ಸಾಧನೆಯ ಮೂಲಕ ಭಗವಂತನೆಡೆಗೆ ಸಾಗುವ ಮಾರ್ಗವನ್ನು ತೋರಿಸಿಕೊಡುತ್ತವೆ. ಆದರೆ ಕೆಳಹಂತದ ಸಾಧಕರಿಗೆ ಒಂದೇ ಬಾರಿಗೆ ಮಾನಸಿಕ ಹಂತಕ್ಕೇರಿ ಸಾಧನೆ ಮಾಡುವುದು ಕಷ್ಟ. ಅದಕ್ಕಾಗಿ ಅವರು ಕೆಳಹಂತದಿಂದಲೇ ಸಾಧನೆಯನ್ನು ಆರಂಭಿಸಬೇಕು. ಅತ್ಯಂತ ಕೆಳಹಂತದ, ಪ್ರಾಥಮಿಕವಾದ ಸಾಧನೆ ಅಥವಾ ಶಿಸ್ತು ಎಂದರೆ ದೈಹಿಕವಾದುದು. ಮೊದಲು ದೈಹಿಕ ಕ್ರಿಯೆಗಳಿಂದ ನಾವು ಶಿಸ್ತು, ಸಂಯಮ ಹಾಗೂ ಸಾಧನೆಯ ಪಾಠವನ್ನು ಕಲಿಯಬೇಕು. ಕ್ರಮೇಣ ಮನಸ್ಸು ಹತೋಟಿಗೆ ಬರುತ್ತದೆ; ಆಗ ಮಾನಸಿಕ ಸಾಧನೆ ಸಾಧ್ಯವಾಗುವುದು. ಹಂತಹಂತವಾಗಿ ಸಾಗುವ ಈ ಬಗೆಯ ಸಾಧನೆ ಆರಂಭವಾಗುವುದು ದೈಹಿಕ ಕ್ರಿಯೆಗಳಿಂದ — ಅಂದರೆ ಹಲವು ಬಗೆಯ ಆಚರಣೆಗಳಿಂದ.

ಎದ್ದ ಕೂಡಲೇ ಕರದರ್ಶನ ಮಾಡುವುದು, ದೇವರಿಗೆ ಕೈ ಮುಗಿಯುವುದು, ಸ್ನಾನಾದಿಗಳನ್ನು ಮುಗಿಸಿ ಸಂಧ್ಯಾವಂದನೆ, ಜಪ-ತಪ, ಪಾರಾಯಣ, ದೇವಸ್ಥಾನಕ್ಕೆ ಹೋಗಿ ನಮಸ್ಕರಿಸುವುದು, ವಿಶೇಷ ದಿನಗಳಲ್ಲಿ ಪೂಜೆ-ಉಪವಾಸ-ವ್ರತ, ಹಬ್ಬ ಹರಿದಿನಗಳು, ವೈಯಕ್ತಿಕ ಉಪಾಸನೆ, ಹರಕೆ ಇತ್ಯಾದಿ — ಹೀಗೆ ದೈನಂದಿನ ಚಟುವಟಿಕೆಗಳುದ್ದಕ್ಕೂ ನಡೆಯುವ ಆಚರಣೆಗಳಿಗೆ ಲೆಕ್ಕವಿಲ್ಲ. ಇವೆಲ್ಲ ಒಬ್ಬನ ಮನಸ್ಸನ್ನು ದೇವರತ್ತ, ಆಧ್ಯಾತ್ಮಿಕ ಸಾಧನೆಯತ್ತ ಕರೆದೊಯ್ಯಲು ಸಹಾಯ ಮಾಡುವ ಆಚರಣೆಗಳು. ಪ್ರತಿನಿತ್ಯ ವಾಡಿಕೆಯಂತೆ, ಸಂಪ್ರದಾಯದಂತೆ ನಿರಂತರ ಇವುಗಳನ್ನು ಪಾಲಿಸುತ್ತ ಬಂದವರಿಗೆ ಅದಕ್ಕನುಗುಣವಾಗಿ ಶ್ರದ್ಧೆ, ನಂಬಿಕೆ, ಭಕ್ತಿ ಇವು ದೃಢವಾಗುತ್ತವೆ. ಅವರು ತಾವಾಗಿಯೇ ಇನ್ನಷ್ಟು ಹೆಚ್ಚಿನ ಆಧ್ಯಾತ್ಮಿಕ ಸಾಧನೆಯನ್ನು ಕಂಡುಕೊಳ್ಳಲು ಇವು ನೆರವಾಗುತ್ತವೆ.

ಆಚರಣೆಗಳ ಇನ್ನೊಂದು ವಿಶೇಷ ಲಾಭವೆಂದರೆ, ಒಬ್ಬ ಸಾಧಕನು ಉನ್ನತ ಹಂತವನ್ನು ತಲುಪಿದ ನಂತರವೂ ಅವು ಅವನನ್ನು ಶಿಸ್ತಿಗೆ ಒಳಪಡಿಸುವುದು. ಮಾನಸಿಕ ಭಾವಗಳು ಸತತ ಏರುಪೇರಾಗುವ ಸಾಧ್ಯತೆಯಿದೆ; ಅದೇ ರೀತಿ ಮನುಷ್ಯನ ಮನಸ್ಥಿತಿ ಕೂಡ ಹಲವು ಸಂದರ್ಭಗಳಲ್ಲಿ, ಹಲವು ದಿನಗಳಲ್ಲಿ ಏರುಪೇರಾಗುವ ಸಾಧ್ಯತೆಯಿದೆ. ಅಂತಹ ಸಂದರ್ಭದಲ್ಲಿ ದೈಹಿಕ ಕ್ರಿಯಾವಿಧಿಗಳ, ಪೂಜೆ ಪುನಸ್ಕಾರಗಳ ಸಹಾಯ ಅಷ್ಟಿಷ್ಟಲ್ಲ. ಕೆಳಕ್ಕೆ ಜಾರುವ ಮನಸ್ಸನ್ನು ಒಂದು ಹಂತದಲ್ಲಿ ಹಿಡಿದಿಟ್ಟು, ಅದು ಸಂಪೂರ್ಣ ಉರುಳಿಹೋಗದಂತೆ ಅವು ತಡೆಯುತ್ತವೆ. ಇದನ್ನು ಒಂದು ಸಣ್ಣ ಕಥೆಯ ಮೂಲಕ ನಾವು ಮನಗಾಣಬಹುದು:

ಒಬ್ಬ ಸಾಧಕನಿದ್ದ. ಪ್ರತಿದಿನ ಬೆಳಿಗ್ಗೆ ಅರ್ಧಗಂಟೆ ಗೀತೆಯನ್ನು ಓದುವ ಅಭ್ಯಾಸ ಅವನಿಗಿತ್ತು. ಹಲವು ವರ್ಷಗಳ ನಂತರ ಅವನಿಗೆ ಸಂದೇಹ ಕಾಡಿತು: 'ಇದೇನಿದು? ದಿನನಿತ್ಯ ನಾನು ಗೀತೆ ಓದುತ್ತೇನೆ. ನಾನಂತೂ ಭಗವಂತನ ಮಾತುಗಳನ್ನು ನಂಬಿದ್ದೇನೆ. ಅವನ ಪೂಜೆ ಮಾಡುತ್ತೇನೆ, ಧ್ಯಾನ ಮಾಡುತ್ತೇನೆ. ಆದರೂ ನನಗೆ ಅವನ ದರ್ಶನವಾಗಲಿಲ್ಲ. ಬದಲಾಗಿ ಒಂದಾದ ಮೇಲೊಂದರಂತೆ ದುರಂತಗಳೇ ನಡೆಯುತ್ತಿವೆ. ನನ್ನ ಸಂಕಟಗಳಿಗೆ ಒದಗದ ಭಗವಂತನನ್ನು ನಾನೇಕೆ ನಂಬಬೇಕು?' ಅವನು ದೇವರಲ್ಲಿ ನಂಬಿಕೆ ಕಳೆದುಕೊಂಡ. ಪೂಜೆ, ಪುನಸ್ಕಾರ, ದೇವಸ್ಥಾನಕ್ಕೆ ಹೋಗುವುದು, ಧ್ಯಾನ, ಜಪ ಎಲ್ಲವನ್ನೂ ಬಿಟ್ಟ. ಆದರೆ ಗೀತೆ ಓದುವುದನ್ನೇಕೋ ಬಿಡಲಿಲ್ಲ. ಎಂದಿನಂತೆ ಓದುತ್ತಲೇ ಇದ್ದ. ಹಲವುದಿನಗಳ ನಂತರ, ಒಂದು ದಿನ ಬೆಳಿಗ್ಗೆ ಗೀತೆ ಓದುತ್ತಿದ್ದಾಗ, **'ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ। ಅಹಂ ತ್ವಾ ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾ ಶುಚಃ ॥'** (ಉಳಿದೆಲ್ಲ ವಿಚಾರಗಳನ್ನು ತ್ಯಜಿಸಿ ನನ್ನಲ್ಲೇ ಶರಣಾಗು. ನಿನ್ನನ್ನು ಎಲ್ಲ ಪಾಪಗಳಿಂದಲೂ ನಾನು ಮುಕ್ತನನ್ನಾಗಿಸುವೆನು; ಶೋಕಿಸಬೇಡ) ಎಂಬ ಶ್ಲೋಕ ಬಂತು. ಅದನ್ನು ಓದುತ್ತಿದ್ದಂತೆಯೇ ಅಲ್ಲಿಯ ತನಕ ಅವನಲ್ಲಿ ಮಡುಗಟ್ಟಿದ್ದ ಎಲ್ಲ ಭಾವನೆಗಳೂ ಈಗ ಉಕ್ಕಿಹರಿಯತೊಡಗಿದವು. ತನ್ನೆಲ್ಲ ಸಮಸ್ಯೆಗಳಿಗೂ ಶರಣಾಗತಿಯಲ್ಲಿ ಪರಿಹಾರವಿದೆ ಎಂದು ಅವನಿಗೆ ಅನ್ನಿಸಿತು. ಅವನ ಸಂದೇಹವೆಲ್ಲವೂ ಯಾವುದೋ ಒಂದು ಕ್ಷಣದಲ್ಲಿ ಹೀಗೆ ತೊಲಗಿ ಹೋಗಿ, ಮತ್ತೆ ಭಗವಂತನಲ್ಲಿ ದೃಢ ನಂಬಿಕೆ ಬೇರೂರಿತು. ಕ್ಷಣಿಕವಾಗಿ ಮನಸ್ಸನ್ನು ಕಾಡುತ್ತಿದ್ದ ಸಂದೇಹ ತೊಲಗಿತು. ಆದರೆ ಆ ಸಂದೇಹದ ಕ್ಷಣದಲ್ಲಿ ಅವನು ಸರ್ವನಾಶವಾಗದಂತೆ, ಎಲ್ಲವನ್ನೂ ಕಳೆದುಕೊಂಡು ಮೂರಾಬಟ್ಟೆಯಾಗದಂತೆ ಗೀತೆಯ ಓದು ಅವನನ್ನು ಕಾಪಾಡಿತು. ಇದು ನಿಯಮಿತವಾದ ಆಚರಣೆಯ ಫಲ.

ಪ್ರತಿನಿತ್ಯ ನಿಯತವಾದ ಸಮಯದಲ್ಲಿ, ನಿಯತವಾದ ಸ್ಥಳದಲ್ಲಿ ಜಪ, ತಪ, ಭಜನೆ, ಪೂಜೆ, ಧ್ಯಾನಗಳನ್ನು ಮಾಡುವುದರ ಉದ್ದೇಶ ಇದೇ. ಕೆಲವೊಂದು ಕಾರಣಗಳಿಂದ ಕೆಲವು ದಿನ ಮನಸ್ಸು ಕೆಳಮಟ್ಟದಲ್ಲಿದ್ದರೂ, ಅಭ್ಯಾಸ ಬಲದಿಂದ ಮಾಡುವ ಆಚರಣೆಗಳು ಮನಸ್ಸು ಪತನಹೊಂದುವುದನ್ನು ತಡೆದು ನಿಲ್ಲಿಸುತ್ತವೆ. ಒಂದು ಬಾರಿ ಮಾನಸಿಕ ಅವಸ್ಥೆ ಸಹಜ ಸ್ಥಿತಿಗೆ ಬಂದ ಕೂಡಲೇ, ಮೊದಲಿನ ಚೈತನ್ಯವನ್ನು ಮತ್ತೆ ಪಡೆದುಕೊಂಡು ಸಾಧನೆಯ ಮಾರ್ಗದಲ್ಲಿ ಮುನ್ನಡೆಯುವುದು ಸಾಧ್ಯವಾಗುತ್ತದೆ. ಹೀಗೆ ಮಾನಸಿಕ ಸ್ತಿಮಿತವನ್ನು ಕಾಪಾಡುವ ಮೂಲಕ ದೈಹಿಕ ಆಚರಣೆಗಳು ಸಾಧಕನನ್ನು ಕಾಪಾಡುತ್ತವೆ.

ಆಚರಣೆಯ ಹಂತವನ್ನು ಮೀರುವ ಅಗತ್ಯ

ಸಾಧಕನು ಮುಂದುವರಿದಂತೆ ಮಾನಸಿಕ ಸಾಧನೆಯ ಹಂತದಲ್ಲಿ ಸ್ಥಿರವಾಗುತ್ತಾನೆ. ಆಗ ಅವನನ್ನು ಸಾಮಾನ್ಯ ಏರುಪೇರುಗಳು ವಿಚಲಿತಗೊಳಿಸಲಾರವು. ಈ ಹಂತದಲ್ಲಿ ಅವನು ಆಚರಣೆಗಳನ್ನು ಬಿಟ್ಟರೂ ತೊಂದರೆಯೇನಿಲ್ಲ. ಶ್ರೀರಾಮಕೃಷ್ಣರು, ''ಯಾವಾಗ ಹರಿನಾಮ, ರಾಮನಾಮವನ್ನು ಉಚ್ಚರಿಸಿದಾಗ ಪ್ರೇಮಾಶ್ರು ಸುರಿಯುವುದೋ ಆಗ ನೀವು ಇನ್ನು ಸಂಧ್ಯಾದಿ

ಗಳನ್ನು ಮಾಡಬೇಕಾಗಿಲ್ಲ. ಆಗ ಮಾತ್ರ ನಿಮಗೆ ಕರ್ಮತ್ಯಾಗಕ್ಕೆ ಅಧಿಕಾರ. ಕರ್ಮ ತಾನಾಗಿಯೇ ನಿಮ್ಮನ್ನು ಬಿಟ್ಟುಹೋಗಿತ್ತದೆ. ಆಗ ಕೇವಲ ರಾಮನಾಮವನ್ನೋ ಹರಿನಾಮವನ್ನೋ ಅಥವಾ ಬರೀ ಓಂಕಾರವನ್ನೋ ಜಪಿಸಿದರೆ ಸಾಕು'' ಎನ್ನುತ್ತಾರೆ. *('ವಚನ ವೇದ', ಸಂ.೧, ಪು.೧)* ಇದು ಖಚಿತವಾಗಿ ಮಾನಸಿಕ ಸಾಧನೆಯ ಉನ್ನತ ಅವಸ್ಥೆಯನ್ನು ಹೊಂದಿದವನ ಸ್ಥಿತಿ. ಈ ಹಂತವನ್ನೇರುವ ತನಕವೂ ಸಾಧಕನಿಗೆ ಆಚರಣೆಯ ಅವಲಂಬನೆ ಅತ್ಯಗತ್ಯ.

ಶ್ರೀರಾಮಕೃಷ್ಣರಿಗೂ ಅವರ ವೇದಾಂತ ಸಾಧನೆಯ ಗುರು ತೋತಾಪುರಿಗೂ ನಡೆದ ಒಂದು ಸಂಭಾಷಣೆ ರೋಚಕವಾಗಿದೆ. ತೋತಾಪುರಿ ಬಳಿ ಒಂದು ತಂಬಿಗೆಯಿತ್ತು. ಪ್ರತಿನಿತ್ಯ ತೋತಾಪುರಿ ಚೆನ್ನಾಗಿ ತೊಳೆದು ಬೆಳಗುತ್ತಿದ್ದ. ಅದನ್ನು ಹೋಲಿಕೆಯಾಗಿ ಕೊಟ್ಟು ತೋತಾಪುರಿ ಒಮ್ಮೆ ಹೇಳಿದ, ''ನೋಡು, ಪ್ರತಿದಿನ ಬೆಳಗುತ್ತಿದ್ದರೆ ಪಾತ್ರೆ ಮಲಿನವಾಗುವುದಿಲ್ಲ. ಅದೇ ರೀತಿ ಪ್ರತಿದಿನವೂ ಜಪ, ಧ್ಯಾನ ಮುಂತಾದ ಅನುಷ್ಠಾನ ಮಾಡಬೇಕು.'' ಪ್ರತಿದಿನ ನಿಯಮಿತ ಸಾಧನೆ ಮಾಡಿದರೆ ಮನಸ್ಸು ಸ್ವಚ್ಛವಾಗಿರುತ್ತದೆ ಎಂದು ಅವನ ಇಂಗಿತ. ಅದಕ್ಕೆ ಶ್ರೀರಾಮಕೃಷ್ಣರು, ''ಆದರೆ ಅದು ಚಿನ್ನದ ತಂಬಿಗೆಯಾಗಿದ್ದರೆ ಪ್ರತಿದಿನ ಬೆಳಗಬೇಕಾಗಿಲ್ಲ. ಅದು ಯಾವಾಗಲೂ ಸ್ವಚ್ಛವಾಗಿಯೇ ಇರುತ್ತದೆ'' ಎಂದರು. ಇದರ ಅರ್ಥ, ಈಗಾಗಲೇ ಸಾಕ್ಷಾತ್ಕಾರ ಪಡೆದವರಿಗೆ ಪ್ರತಿನಿತ್ಯ ಅನುಷ್ಠಾನ, ಕರ್ಮ, ಆಚರಣೆಗಳ ಅವಲಂಬನೆ ಬೇಕಾಗಿಲ್ಲ ಎಂದು.

ಆದರೆ ಹಲವು ಮಂದಿ ಸಾಧಕರಿಗೆ ಸಾಕ್ಷಾತ್ಕಾರವೆಂಬುದು ಸುಲಭವಾದ ಕೆಲಸವಲ್ಲ ; ಇಡೀ ಜನ್ಮ ಸಾಧಿಸಿ ಗಳಿಸಬೇಕಾದ ಸಂಪತ್ತು. ಅನೇಕರಿಗೆ ಹಲವು ಜನ್ಮಗಳ ಸಾಧನೆ. ಆದ್ದರಿಂದ, ಅಂಥವರು ಹಲವು ಆಚರಣೆಗಳನ್ನು ಬಹಳ ದೀರ್ಘಕಾಲ ಮಾಡುವ ಅಗತ್ಯವಿದೆ. ಕರ್ಮ ತಾನಾಗಿಯೇ ಬಿದ್ದುಹೋಗುವುದು ಎನ್ನುತ್ತಾರೆ ಶ್ರೀರಾಮಕೃಷ್ಣರು. ಸಾಧಕನು ಪಕ್ವನಾದಾಗ, ಉನ್ನತ ಹಂತವನ್ನು ತಲುಪಿದಾಗ ಕೆಳಹಂತದ ಸಾಧನೆ ತಾನಾಗಿ ಅನಗತ್ಯವೆನಿಸುತ್ತದೆ; ಆಗಲೇ ಅವನು ಅದನ್ನು ಮೀರಿ ಹೋಗುತ್ತಾನೆ, ಅದಕ್ಕಿಂತ ಮೊದಲಲ್ಲ. ಆದರೂ, ಹಲವು ಮಂದಿ ಸಾಧು-ಸಂತರು ಇತರರಿಗೆ ಆದರ್ಶವಾಗಲಿ ಎಂಬ ಕಾರಣಕ್ಕಾಗಿ, ಸಾಕ್ಷಾತ್ಕಾರದ ಬಳಿಕವೂ ಹಲವು ಬಗೆಯ ಆಚರಣೆಗಳನ್ನು ಮುಂದುವರೆಸಿಕೊಂಡು ಹೋಗುತ್ತಾರೆ.

ವಿಚಾರ, ಭಾವಗಳ ಮಿಲನ

ಧಾರ್ಮಿಕ ಆಚರಣೆಗಳಲ್ಲಿ ಎರಡು ಬಗೆ. ಒಂದು, ಅರಿವಿನಿಂದ ಕೂಡಿದ್ದು, ಇನ್ನೊಂದು ಅಂಧಾನುಕರಣೆ. ಮೊದಲಿನದು ಸಾಧಕನಿಗೆ ಇರಬೇಕಾದ ಗುಣ. ಯಾವುದೇ ಆಚರಣೆಯಾಗಿರಲಿ, ಅದನ್ನು ಮಾಡುವುದೇಕೆ, ಅದರ ಹಿಂದಿನ ಅರ್ಥವೇನು, ಅದರ ಮಹತ್ವವೇನು ಎಂಬುದು ತಿಳಿದಿರಬೇಕು. ಎರಡನೆಯ ಬಗೆ, ಅಜ್ಞಾನದಿಂದ ಕೂಡಿದ್ದು. 'ನಮ್ಮ ಹಿಂದಿನವರು ಮಾಡುತ್ತ ಬಂದಿದ್ದಾರೆ. ನಾನೂ ಮಾಡುತ್ತ ಬಂದಿದ್ದೇನೆ. ನಮ್ಮ ಮುಂದಿನವರೂ ಮಾಡುತ್ತಾರೆ' ಎಂಬ ಭಾವವಿದು. ಅವರ ಬಳಿ, ''ನೀವು ಮಾಡುವ ಆಚರಣೆಯ ಹಿಂದಿನ ಅರ್ಥವೇನು?'' ಎಂದು ಕೇಳಿದರೆ, ''ಹಾಗೆಲ್ಲ ಕೇಳಬಾರದು. ಅದರ ಅರ್ಥ ಅಷ್ಟು ಸುಲಭವಾಗಿ ತಿಳಿಯುವಂತಹದಲ್ಲ'' ಎಂದು ಹೇಳುತ್ತಾರೆ. ವಾಸ್ತವವಾಗಿ ತಮ್ಮ ಅಜ್ಞಾನವನ್ನು ಮರೆಮಾಚಲು ಅವರು ಹಾಗೆನ್ನುತ್ತಾರೆ. ಎಲ್ಲ ಮೂಢನಂಬಿಕೆ, ಅನಾಚಾರಗಳಿಗೆ ಇಂಥ ಅಜ್ಞಾನವೇ ಕಾರಣ. ಆದ್ದರಿಂದ ಆಚರಣೆ, ಕ್ರಿಯಾವಿಧಿಗಳು ಮುಖ್ಯ ನಿಜ; ಆದರೆ ಅದರ ಉದ್ದೇಶ ಮತ್ತು ಅರ್ಥ ಇವನ್ನು ಚೆನ್ನಾಗಿ ತಿಳಿದಿರಬೇಕು. ವಿಚಾರ ಮಾಡುತ್ತ, ಅರಿವಿನಿಂದ ಕೂಡಿ ಮಾಡಿದ ಪೂಜೆಯೇ ನಿಜವಾಗಿಯೂ ಅರ್ಥಪೂರ್ಣ ಮತ್ತು ಫಲದಾಯಕವಾಗುವುದು. ಅರಿವಿನಿಂದ ಕೂಡಿದ ಆಚರಣೆಗಳಲ್ಲಿ ನಮ್ಮ ಮನಸ್ಸು, ಹೃದಯ, ಭಾವ ಎಲ್ಲವೂ ಸೇರಿಕೊಳ್ಳುತ್ತವೆ; ಅವು ವೈಯಕ್ತಿಕವಾಗಿ, ಸಾಮೂಹಿಕವಾಗಿ ಪ್ರಭಾವ ಬೀರುತ್ತದೆ. ಅವು ನಮ್ಮ ಸಾಂಸ್ಕೃತಿಕ ಹಾಗೂ ಆಧ್ಯಾತ್ಮಿಕ ಸಮೃದ್ಧಿಯನ್ನು ಮುಂದುವರಿಸಿಕೊಂಡು ಹೋಗುತ್ತವೆ.

ಸಮಗ್ರ ದೃಷ್ಟಿ

ಆಚರಣೆಗಳ ಮಹತ್ವವನ್ನು ನಾವು ಕೇವಲ ವೈಯಕ್ತಿಕ ದೃಷ್ಟಿಯಿಂದ ಅಳೆಯಲಾಗದು. ಒಬ್ಬ ವ್ಯಕ್ತಿ ನಾಸ್ತಿಕನಾಗಿದ್ದರೆ, ಅವನು ಆಚರಣೆಗಳನ್ನು ಹೀಗಳೆಯಲಿ, ಆಚರಿಸದೆ ಇರಲಿ. ಆದರೆ ಅದು ಇಡೀ ಸಮಾಜಕ್ಕೇ ಅನಗತ್ಯವೆಂದು ಅವನು ಹೇಳಿದರೆ ಅದು ತಪ್ಪು. ಅದು ಅವನ ಅಹಂಕಾರವನ್ನು ಪ್ರದರ್ಶಿಸುವುದು. ಅಂತೆಯೇ, ಇನ್ನೊಬ್ಬ ವ್ಯಕ್ತಿ ಆಚರಣೆಯ ಹಂತವನ್ನು ಮೀರಿ ಸಾಕ್ಷಾತ್ಕಾರ ಪಡೆದೇಬಿಟ್ಟರೆ, ಆಚರಣೆಗಳು ಅನಗತ್ಯವೆನ್ನಲಾಗದು. ಅವನಿಗೆ ಅದರ ಅಗತ್ಯವಿಲ್ಲ, ಆದರೆ ಹಲವರಿಗೆ ಅಗತ್ಯವಿದೆ. ಈ ಕಾರಣದಿಂದಲೇ ಇರಬೇಕು, ಯಾರು ಬೇಕಾದರೂ ಯಾವ ಬಗೆಯ ಆಧ್ಯಾತ್ಮಿಕ ಸಾಧನೆಯನ್ನಾದರೂ ಅನುಸರಿಸುವ ಸ್ವಾತಂತ್ರ್ಯ ಹಿಂದೂಧರ್ಮದಲ್ಲಿದೆ. ನಮ್ಮ ಸಂಸ್ಕೃತಿಯಲ್ಲಿರುವ ಸಮಗ್ರದೃಷ್ಟಿ ಇದು. ಆದ್ದರಿಂದಲೇ ನಮ್ಮಲ್ಲಿ ಆಚರಣೆಗಳನ್ನು, ಮೂರ್ತಿಪೂಜೆಯೇ ಮುಂತಾದ ಕ್ರಿಯಾವಿಧಿಗಳನ್ನು ಸ್ವೀಕರಿಸಲಾಗಿದೆ. ಸಮಾಜದ ಎಲ್ಲ ಹಂತಗಳಲ್ಲಿರುವ ಜನರಿಗೂ ಯೋಗ್ಯವಾಗುವಂತೆ, ಹಲವು ಹಂತಗಳ ಸಾಧನಾವಿಧಿಗಳನ್ನು ಹೊಂದಿರುವುದು ಹಿಂದೂ ಧರ್ಮದ ವೈಶಿಷ್ಟ್ಯವಾಗಿದೆ.

ಆಗಸ್ಟ್ ತಿಂಗಳ ಕಾರ್ಯಕ್ರಮಗಳು

೧೧	ಭಾನುವಾರ	ಏಕಾದಶಿ
೧೫	ಗುರುವಾರ	ಸ್ವಾಮಿ ನಿರಂಜನಾನಂದ ಜಯಂತಿ
೨೪	ಶನಿವಾರ	ಶ್ರೀಕೃಷ್ಣ ಜನ್ಮಾಷ್ಟಮಿ
೨೬	ಸೋಮವಾರ	ಏಕಾದಶಿ
೨೯	ಗುರುವಾರ	ಸ್ವಾಮಿ ಅದ್ವೈತಾನಂದ ಜಯಂತಿ